**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ**10001/22

ಪಿಡಬ್ಲೂ–13

ಸಿಡಬ್ಲೂ– 16

| | | |
|---|---|---|
| ಸಾಕ್ಷಿ ಹೆಸರು | – | ಚಂದ್ರಶೇಖರ್ ಜಿ |
| ತಂದೆ ಹೆಸರು | – | ಗುರಪ್ಪಗೌಡ |
| ವಯಸ್ಸು | – | 50 ವರ್ಷ |
| ಉದ್ಯೋಗ | – | ಪಿ ಡಿ ಒ , ತೂದೂರು , ತೀರ್ಥಹಳ್ಳಿ |
| ವಾಸಃ | – | ಶಿವಮೊಗ್ಗ |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 14–02–2025**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನಾನು 2013 ರಿಂದ ಜುಲೈ 2023 ರವರೆಗೆ ಗ್ರಾಮ ಪಂಚಾಯಿತಿ ರಿಪ್ಪನ್ ಪೇಟೆ ಯಲ್ಲಿ ಪಿ ಡಿ ಒ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ16–12–2019 ರಂದು ರಿಪ್ಪನ್ ಪೇಟೆ ಸಬ್ ಇನ್ಸ್ ಪೆಕ್ಟರ್ ರವರು ರವಿ ಯವರ ಮನೆಯ ಮುಂಭಾಗದಲ್ಲಿ ಗಲಾಟೆಯಾಗಿದ್ದು ಅದಕ್ಕೆ ಸಂಬಂಧಪಟ್ಟ ಹಾಗೆ ಮನೆಯ ದಾಖಲಾತಿಗಳನ್ನು ಕೇಳಿದ್ದರು. ನಾನು ದಿನಾಂಕಃ 23–02–2020 ರಂದು ಡಿ ಆರ್ ನಂಃ 368 ಬರುವೆ ಗ್ರಾಮಕ್ಕೆ ಸಂಬಂಧಪಟ್ಟದ್ದಾಗಿದ್ದು ಸದರಿ ಡಿ ಆರ್ ರೇಖಾ ಕೋಂ ರವಿರವರ ಹೆಸರಿಗೆ ಇದ್ದು ಈ ಬಗ್ಗೆ ನಾನು ಡಿಮ್ಯಾಂಡ್ ರಿಜಿಸ್ಟರ್ ಮತ್ತು ಒಂದುದೃಢೀಕರಣ

ವನ್ನು ಕೊಟ್ಟಿರುತ್ತೇನೆ. ಸದರಿ ಡಿಮ್ಯಾಂಡ್ ರಿಜಿಸ್ಟರ್ ನ್ನು ಸಾಕ್ಷಿ ನೋಡಿ ಗುರುತಿ,ಸಿದ್ದು ಅದನ್ನು ನಿಪಿ 15 ಎಂದು ಸಾಕ್ಷಿಯ ಸಹಿಯನ್ನು ನಿಪಿ15(ಎ) ಎಂದು ಗುರುತಿಸಲಾಯಿತು. ದೃಢೀಕರಣವನ್ನು ಸಾಕ್ಷಿ ನೋಡಿ ಗುರುತಿ,ಸಿದ್ದು ಅದನ್ನು ನಿಪಿ 16 ಎಂದು ಸಾಕ್ಷಿಯ ಸಹಿಯನ್ನು ನಿಪಿ16(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 4 ನೇ ಆರೋಪಿತನ ಪರ ವಕೀಲರಿಂದಃ**

ರಿಪ್ಪನ್ ಪೇಟೆ ಪೋಲೀಸ್ ಸಬ್ ಇನ್ಸ್ ಪೆಕ್ಟರ್ ರವರು ಲಿಖಿತವಾಗಿ ನಿವೇದನೆ ಕೊಟ್ಟಿದ್ದು ಸದರಿ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತನಿಖಾಧಿಕಾರಿಗಳು ನನ್ನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಇದೇ ಜಾಗಕ್ಕೆ ಸಂಬಂಧಪಟ್ಟ ದಾಖಲಾತಿ ಕೊಡಿ ಎಂದು ಕೇಳಿಲ್ಲ. ಆದರೆ ಪತ್ರವನ್ನು ಕೊಟ್ಟಿರುತ್ತಾರೆ. ಪೋಲೀಸರು ಪ್ರಾಸಾ12 ರವಿಯವರ ಜಾಗಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಬೇಕೆಂದು ಕೇಳಿದ್ದು ಆದರೆ ಆ ಸಮಯದಲ್ಲಿ ಸದರಿ ದಾಖಲೆ ರವಿಯ ಹೆಂಡತಿಯಾದ ರೇಖರವರ ಹೆಸರಿಗೆ ಇರುತ್ತದೆ. ರವಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ.

ನಿಪಿ 15 ರಲ್ಲಿ ಸ್ಥಳದ ಅಳತೆಯನ್ನು ಬರೆದಿಲ್ಲ. ಕ್ರಮಬದ್ಧವಾದ ಆಸ್ತಿ ಕ್ರಮಬದ್ಧವಲ್ಲದ ಆಸ್ತಿ ಎಂದು ಎರಡು ನಮೂನೆಗಳು ಇರುತ್ತವೆ ಎಂದರೆ ಹೌದು. ಕ್ರಮಬದ್ದವಾದ ಆಸ್ತಿ ಎಂದರೆ ನಮೂನೆ 11(ಎ)ಎಂದು ಮಾಡುತ್ತೇವೆ. ಕ್ರಮಬದ್ಧವಲ್ಲದ ಆಸ್ತಿಗೆ ನಮೂನೆ 11(ಬಿ) ಎಂದು ಮಾಡುತ್ತೇವೆ ಎಂದರೆ ಹೌದು. ನಿಪಿ15 ರಲ್ಲಿ ರೇಖಾರವರ ಫೋಟೋ, ಮನೆಯ ಫೋಟೋವಾಗಲೀ ಜಾಗದ ಫೋಟೋವಾಗಲೀ ಕಂಡುಬರುವುದಿಲ್ಲ ಎಂದರೆ ಹೌದು. ಪೋಲೀಸರು ಹೇಳಿದ್ದರಿಂದ ನಿಪಿ 15 ನ್ನು ನೀಡಿರುತ್ತೇನೆ ಎಂದರೆ ಹೌದು. ನಿಪಿ

15 ರವಿನ್ನೂ ದಾಖಲೆಯಾಗಿರುತ್ತದೆ. ನಿಪಿ 15 ರಲ್ಲಿ ಕಂಡುಬರುವ ರೇಖಾ ರವಿಯ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1, 2 ಮತ್ತು 3 ನೇ ಆರೋಪಿತರ ಪರ ವಕೀಲರಿಂದ**

(ಉಳಿದ ಆರೋಪಿತರ ಪರ ವಕೀಲರು 4 ನೇ ಆರೋಪಿತರ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).